


# ‘ಭೀಮ’ ಸಂದೇಶ

ನಟ ದುನಿಯಾ ವಿಜಯ್ ನಟಿಸಿ, ನಿರ್ದೇಶನ ಮಾಡಿರುವ ‘ಭೀಮ’ ಚಿತ್ರ ಇದೇ ಆಗಸ್ಟ್ 9ಕ್ಕೆ ತೆರೆಗೆ ಬರುತ್ತಿದ್ದು, ಈ ಸಿನಿಮಾ ಬಗ್ಗೆ ವಿಜಯ್ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ. ಈ ಸಿನಿಮಾವನ್ನು ಏಕೆ ನೋಡಬೇಕು ಎಂಬುದಕ್ಕೆ ತಮ್ಮದೇ ವಿವರಣೆಯನ್ನೂ ನೀಡಿದ್ದಾರೆ.

‘ಈ ಚಿತ್ರದ ಮೂಲಕ ಒಂದು ಸೂಕ್ಷ್ಮ ವಿಚಾರವನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಿದ್ದೇನೆ. ಈ ಸಿನಿಮಾ ನೋಡಿದ ಮೇಲೆ ಈ ಚಿತ್ರದ ಮೂಲಕ ನಾನು ಹೇಳಲು ಹೊರಟಿರುವ ವಿಚಾರದ ಮೇಲೆ ಮಾಧ್ಯಮಗಳು ಬೆಳಕು ಚೆಲ್ಲುವ ಮೂಲಕ ಎಲ್ಲರಲ್ಲೂ ಜಾಗೃತಿ ಮೂಡುವಂತೆ ಆಗಬೇಕು. ಈ ಸೂಕ್ಷ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ. ಇದು ಎಲ್ಲಾ ವಯೋಮಾನದವರೂ ನೋಡಬೇಕಾದ ಕಥೆ. ವಿದ್ಯಾರ್ಥಿಗಳು, ಅದರಲ್ಲೂ ಹೆಣ್ಣು ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ’ ಎಂದಿದ್ದಾರೆ.

ಸಿನಿಮಾದಲ್ಲಿ ನಾಯಕಿಯಾಗಿ ಅಶ್ವಿನಿ ಕಾಣಿಸಿಕೊಂಡಿದ್ದಾರೆ. ಮಾದಕ ವಸ್ತುಗಳ ಕುರಿತು ಸಂದೇಶ ನೀಡುವ ಈ ಸಿನಿಮಾದಲ್ಲಿ ರಂಗಾಯಣ ರಘು, ಅಚ್ಯುತ್ ಕುಮಾರ್, ನಯನಾ ಸೂಡ, ರಾಘು ಶಿವಮೊಗ್ಗ, ಗೋಪಾಲಕೃಷ್ಣ ದೇಶಪಾಂಡೆ ಮೊದಲಾದವರು ತಾರಾಗಣದಲ್ಲಿದ್ದಾರೆ.

ಬುಡಕಟ್ಟು ಸಮುದಾಯದ ‘ಅಮ್ಮಾಳೆ’ ಎಂಬ ಹಾಡು ಕೂಡ ಸಿನಿಮಾ ವಿಶೇಷಗಳಲ್ಲಿ ಒಂದು. ಚಿತ್ರಕ್ಕೆ ಚರಣ್‌ರಾಜ್ ಸಂಗೀತವಿದ್ದು, ಮಂಜು ಮಾಸ್ತಿ ಸಂಭಾಷಣೆಯಿದೆ. ■

# ಮೊನಾಲಿಸಾ ಮೆಲುಕು



‘‘ಮೊನಾಲಿಸಾ’ ಸಿನಿಮಾ ಮಾಡುವ ಮೊದಲು ನನಗೆ ಸಿಕ್ಕಿದ್ದ ಬಹುಪಾಲು ಪಾತ್ರಗಳು ಹಳ್ಳಿ ಹುಡುಗಿಯದ್ದೇ ಆಗಿದ್ದವು. ಆದರೆ ತುಂಬಾ ಬೇರೆಯದೇ ಲುಕ್‌ನಲ್ಲಿ ನಾನು ಮೊನಾಲಿಸಾ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದೆ. ತುಂಬಾ ಸ್ಟೈಲಿಷ್ ಆಗಿ ಕನ್ನಡ ಸಿನಿಮಾರಂಗಕ್ಕೆ ಎಂಟ್ರಿ ಕೊಟ್ಟಿದ್ದೆ...’’

ನಟಿ ಸದಾ, ತಾವು ಕನ್ನಡ ಸಿನಿಮಾರಂಗ ಪ್ರವೇಶಿಸಿದ ಬಗೆ ಹಾಗೂ ತಮ್ಮ ಸಿನಿಮಾ ಪಯಣವನ್ನು ಹೀಗೆ ಮೆಲುಕು ಹಾಕಿದ್ದಾರೆ. ಸದಾ, ಧ್ಯಾನ್ ಅಭಿನಯದ, ಇಂದ್ರಜಿತ್ ಲಂಕೇಶ್ ನಿರ್ದೇಶನದ ‘ಮೊನಾಲಿಸಾ’ ಸಿನಿಮಾ ಬಿಡುಗಡೆಯಾಗಿ 20 ವರ್ಷ ಕಳೆದ ನೆನಪಿನಲ್ಲಿ ನಗರದಲ್ಲಿ ಪುಟ್ಟದಾಗಿ ನಡೆದ ಪಾರ್ಟಿಯಲ್ಲಿ ಸದಾ ಹಲವು ನೆನಪುಗಳನ್ನು ಮೆಲುಕು ಹಾಕಿದ್ದಾರೆ.

‘‘ಆಗಷ್ಟೇ ನಾನು ತೆಲುಗಿನ ‘ಜಯಂ’ ಸಿನಿಮಾ ಮುಗಿಸಿದ್ದೆ. ಇನ್ನಷ್ಟು ತೆಲುಗು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೆ. ಆ ಸಮಯದಲ್ಲಿ ಇಂದ್ರಜಿತ್ ಅವರು ಈ ಸಿನಿಮಾಗೆ ನನ್ನನ್ನು ಅಪ್ರೋಚ್ ಮಾಡಿದರು. ಇಷ್ಟು ವರ್ಷಗಳು ಕಳೆದರೂ ಆ ಸಿನಿಮಾ, ಹಾಗೇ ನನ್ನ ಪಾತ್ರವನ್ನು ಜನ ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ ಎಂಬುದೇ ಖುಷಿ ವಿಚಾರ’’ ಎಂದು ಹೇಳಿದ್ದಾರೆ.

‘‘ನನ್ನ ಕರಿಯರ್‌ನಲ್ಲಿ ‘ಜಯಂ’, ‘ಉನ್ನಾಲೆ ಉನ್ನಾಲೆ’, ‘ಅನ್ನಿಯನ್’ನಂಥ ದೊಡ್ಡ ಸಿನಿಮಾಗಳ ನಡುವೆಯೂ ಸಿನಿಮಾರಂಗದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದೇನೆ ಎಂಬ ಭಾವನೆ ಬಂದಿಲ್ಲದಿರುವುದು ವಿಚಿತ್ರ ಎನಿಸುತ್ತದೆ. ನಾನು ತುಂಬಾ ಪ್ರೈವೇಟ್ ಪರ್ಸನ್. ಹೀಗಾಗಿ ತಂಡಗಳಿಂದ ನನಗೆ ಫೀಡ್‌ಬ್ಯಾಕ್ ಬರುತ್ತಿರಲಿಲ್ಲ. ಆದರೆ ವಿಮರ್ಶೆಗಳು ನನ್ನನ್ನು ತಿದ್ದಿದವು. ಈಗಲೂ ನನ್ನ ಪಾತ್ರಗಳ ಬಗ್ಗೆ ಜನರು ಮಾತನಾಡುತ್ತಾರೆ’’ ಎಂದರು.

ಮೊನಾಲಿಸಾ ನಂತರ ಸುಮಾರು ಆರು ಕನ್ನಡ ಸಿನಿಮಾಗಳಲ್ಲಿ ಸದಾ ನಟಿಸಿದ್ದರು. ಜೊತೆಗೆ ರಿಯಾಲಿಟಿ ಶೋಗಳ ತೀರ್ಪುಗಾರರಾಗಿಯೂ ತೊಡಗಿಕೊಂಡಿದ್ದರು. ‘ಈಗಲೂ ಕನ್ನಡ ಸಿನಿಮಾದಲ್ಲಿ ಮಾಡಲು ಸಿದ್ಧ’ ಎನ್ನುವ ಅವರು, ತಮಗೆ ಹೊಂದಿಕೆಯಾಗುವ ಪಾತ್ರಗಳಿಗೆ ಆದ್ಯತೆ ನೀಡುವುದಾಗಿ ಹೇಳಿದ್ದಾರೆ. ■